ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಮಂಡಲ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 16/03/2020

## 31ರವರೆಗೆ ಕಾಲಾವಧಿ | ಶಾಸಕರಲ್ಲಿ ಭಿನ್ನ ನಿಲುವು | ಇಂದು ಸ್ಪಷ್ಟತೆ

# ವಿಧಾನ ಮಂಡಲ ಅಧಿವೇಶನ ಅನಿಶ್ಚಿತತೆ?

ವಿ.ವಾ. 16-3-20

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರೊನಾ ಹಿನ್ನೆಲೆಯಲ್ಲಿ ವಿಧಾನ ಮಂಡಲ ಅಧಿವೇಶನವನ್ನು ಮೊಟಕುಗೊಳಿಸುವ ಬಗ್ಗೆ ಚರ್ಚೆ ನಡೆದಿದ್ದು, ಸೋಮವಾರ ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸಲಿದೆ.

ಇಂದು ಬೆಳಗ್ಗೆ ಕಲಾಪ ಸಲಹಾ ಸಮಿತಿ ಸಭೆ ನಡೆಯುವ ಸಾಧ್ಯತೆ ಇದ್ದು, ಅಲ್ಲಿ ಈ ಬಗ್ಗೆ ಚರ್ಚೆ ನಡೆಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ. ಸ್ಪೀಕರ್ ಜತೆಗೂಡಿ ಮುಖ್ಯಮಂತ್ರಿ, ಪ್ರತಿಪಕ್ಷ ನಾಯಕರು ಅಧಿವೇಶನ ಕುರಿತು ತೀರ್ಮಾನಕ್ಕೆ ಬರಲಿದ್ದಾರೆ. ಈಗಾಗಲೆ ಬಜೆಟ್ ಅಧಿವೇಶನ ಮಾ.31ರವರೆಗೆ ನಡೆಸಲು ವೇಳಾಪಟ್ಟಿ ಸಿದ್ಧವಾಗಿದೆ.



ಬಜೆಟ್ ಮಂಡನೆಯಾಗಿದ್ದರೂ ಅದರ ಮೇಲೆ ಚರ್ಚೆ ಆರಂಭವಾಗಿಲ್ಲ. ಪ್ರಸ್ತುತ, ಸಂವಿಧಾನ ಕುರಿತ ಚರ್ಚೆಯೇ ಪೂರ್ಣವಾಗಿಲ್ಲ.

> ವಿಧಾನಸಭೆ, ಪರಿಷತ್ ಸೀಮಿತ ಸಂಖ್ಯೆಯಲ್ಲಿ ನಡೆಯುವ ಸಭೆ. ಹೀಗಾಗಿ ಕಲಾಪ ಮೊಟಕು ಮಾಡುವುದು ಸರಿಯಾದ ಕ್ರಮವಲ್ಲ. ಒಂದಷ್ಟು ಮುನ್ನೆಚ್ಚರಿಕೆ ಕ್ರಮಕೈಗೊಂಡರೆ ಸೂಕ್ತ.
>
> | ರವಿಕುಮಾರ್ ವಿ.ಪರಿಷತ್ ಸದಸ್ಯ

ಹೀಗಿರುವಾಗ ಅಧಿವೇಶನ ಮೊಟಕುಗೊಳಿಸುವುದು ಸರಿಯಲ್ಲ ಎಂಬ ವಾದವೂ ಇದೆ.

ಕರೊನಾ ನಿಯಂತ್ರಣಕ್ಕೆ ವಿವಿಧ ಕ್ಷೇತ್ರಗಳಿಗೆ ನಿಯಂತ್ರಣ ಹೇರಿದ ಸರ್ಕಾರ, ವಿಧಾನ ಮಂಡಲ ಕಲಾಪ ಮೊಟಕುಗೊಳಿಸುವ ಪ್ರಸ್ತಾಪ ಇಲ್ಲವೆಂದು ತಿಳಿಸಿತ್ತು. ಈ ನಡುವೆ ಶಾಸಕರು, ವಿಧಾನ ಪರಿಷತ್ ಸದಸ್ಯರನೇಕರು ಕಲಾಪವನ್ನು ಶೀಘ್ರ ಮುಗಿಸಿದರ ಉತ್ತಮ ಎಂದು ಅಭಿಪ್ರಾಯಪಟ್ಟಿದ್ದಾರೆ.

ವಿಧಾನಸಭೆ ಮೊಗಸಾಲೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿದ್ದು, ಈ ವಾರದೊಳಗೆ ಮುಗಿಸಿದರೆ ಉತ್ತಮ ಎಂದು ಹಿರಿಯ ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಒಂದೋ ಬಜೆಟ್ ಮೇಲಿನ ಚರ್ಚೆಯನ್ನು ತಿಂಗಳ ಕೊನೇ ವಾರದಲ್ಲಿ ನಡೆಸಲಿ, ಇಲ್ಲವಾದಲ್ಲಿ ಸೋಮವಾರ-ಮಂಗಳವಾರವೇ ನಡೆಸಿ ಕಲಾಪ ಮುಗಿಸಲಿ. ಬೇಕಿದ್ದರೆ ಏಪ್ರಿಲ್-ಮೇನಲ್ಲಿ ವಿಶೇಷ ಅಧಿವೇಶನ ಕರೆಯಬಹುದೆಂದು ಶಾಸಕರಿಬ್ಬರು ಚರ್ಚೆಯಲ್ಲಿ ತೊಡಗಿದ್ದರು. ಕಲಾಪ ನಡೆಯಬೇಕು, ಕರೊನಾ ನಿರ್ವಹಣೆಗೆ ಕೈಗೊಂಡ ಕ್ರಮಗಳ ಬಗ್ಗೆ ಚರ್ಚೆ ನಡೆಯಲಿ. ಒಂದು ವೇಳೆ ನಮ್ಮ ಸುತ್ತಮುತ್ತಲೇ ಸೋಂಕು ಕಂಡು ಬಂದಾಗ ಸೂಕ್ತ ತೀರ್ಮಾನ ಮಾಡಲಿ ಎಂದು ಮಾಜಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.